ನಕ್ಸಲೈಟ್ ಕಾರ್ಯಚರಣೆ ಕುರಿತು

11 (225) : ಶ್ರೀ ಸುನೀಲ್ ಕುಮಾರ್ (ಕಾರ್ಕಳ) ಮಾನ್ಯ ಮುಖ್ಯಮಂತ್ರಿಯವರು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ನಕ್ಸಲೇಟ್ ಚಟುವಟಿಕೆ ಸಂಬಂಧವಾಗಿ ಈದು ಗ್ರಾಮ ವ್ಯಾಪ್ತಿಗೆ ಏನೇನು ಸೌಲಭ್ಯಗಳ ವಿಶೇಷ ಪ್ಯಾಕೇಜನ್ನು ಸರ್ಕಾರ ವತಿಯಿಂದ ಪ್ರಕಟಿಸಲ್ಪಟ್ಟಿದೆ;

ಆ) ಇದರ ಕಾರ್ಯರೂಪಕ್ಕೆ ಎಷ್ಟು ಕಾರ್ಯಕ್ರಮಗಳು ಬಂದಿದೆ;

ಇ) ಇದುವರೆಗೆ ಎಷ್ಟು ಹಣ ಬಿಡುಗಡೆಯಾಗಿದೆ ಹಾಗೂ ಖರ್ಚಾಗಿರುತ್ತದೆ. ವಿವರ ತಿಳಿಸುವುದು?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಯವರು)

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಬಸವಕಲ್ಯಾಣ ಅಭಿವೃದ್ಧಿ ಪ್ರಾಧಿಕಾರ ಸ್ಥಾಪನೆ

12 (228) : ಶ್ರೀ ಮಲ್ಲಿಕಾರ್ಜುನ ಸಿ. ಖೂಬಾ (ಬಸವಕಲ್ಯಾಣ) ಮಾನ್ಯ ಕಂದಾಯ ಸಂದೀಯ ವ್ಯವಹಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕೂಡಲ ಸಂಗಮದಲ್ಲಿ ಸ್ಥಾಪಿಸಿರುವ ಮಾದರಿಯಲ್ಲಿ ಬಸವ ಕಲ್ಯಾಣದಲ್ಲಿಯೂ ಅಭಿವೃದ್ಧಿ ಪ್ರಾಧಿಕಾರವನ್ನು ಸ್ಥಾಪಿಸುವುದಾಗಿ ಹಿಂದಿನ ಸರ್ಕಾರ ಘೋಷಣೆ ಮಾಡಿರುವುದು ನಿಜವಲ್ಲವೆ;

ಆ) ಹಾಗಿದ್ದಲ್ಲಿ, ಈ ವಿಷಯದ ಬಗ್ಗೆ ಸರ್ಕಾರವು ಯಾವ ಕ್ರಮಗಳನ್ನು ಕೈಗೊಂಡಿದೆ.

ಇ) ಇದಕ್ಕಾಗಿ ಆಯವ್ಯಯದಲ್ಲಿ ಇಲ್ಲಿಯವರೆಗೆ ಎಷ್ಟು ಹಣವನ್ನು ಮೀಸಲಾಗಿಡಲಾಗಿದೆ.

ಈ) ಇನ್ನು ಎಷ್ಟು ಸಮಯದಲ್ಲಿ ಈ ಪ್ರಾಧಿಕಾರ ರಚನೆಯಲ್ಲಿದೆ.

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಸಂದೀಯ ವ್ಯವಹಾರ ಸಚಿವರು)

ಅ) ಹೌದು.

ಆ) ಈ ಬಸವಕಲ್ಯಾಣ ಅಭಿವೃದ್ಧಿ ಪ್ರಾಧಿಕಾರ ರಚನೆಯ ರೂಪ-ರೇಷೆಗಳನ್ನು ತಯಾರಿಸಲು ವಿಶೇಷಾಧಿಕಾರಿಯನ್ನು ನೇಮಿಸಲಾಗಿದೆ. ಸದರಿ ಅಧಿಕಾರಿಗಳು ಪ್ರಾಧಿಕಾರದ ನೀತಿ ನಿಯಮಗಳನ್ನು ತಯಾರಿಸಿ ಸರ್ಕಾರಕ್ಕೆ ಅನುಮೋದನೆಗಾಗಿ ಸಲ್ಲಿಸಿರುತ್ತಾರೆ. ಸದರಿ ಕರಡು ನೀತಿ ನಿಯಮಾವಳಿಗಳನ್ನು ಸಂಸದೀಯ ವ್ಯವಹಾರಗಳ ಇಲಾಖೆಗೆ ಪರಿಷ್ಕರಣೆಗಾಗಿ ಕಳುಹಿಸಲಾಗಿದೆ.

ಇ) 2004-05ನೇ ಆಯವ್ಯಯದಲ್ಲಿ ಇದಕ್ಕೆ ರೂ. 500.00 ಲಕ್ಷಗಳನ್ನು ಒದಗಿಸಲು ಕೋರಲಾಗಿದೆ.

ಈ) ಸಂಸದೀಯ ವ್ಯವಹಾರಗಳ ಇಲಾಖೆಯಿಂದ ಸಹಮತಿ ಬಂದ ನಂತರ ಪ್ರಾಧಿಕಾರ ರಚನೆಯ ಬಗ್ಗೆ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಗುಲ್ಬರ್ಗಾದಲ್ಲಿ ಪೈಪ್ ಲೈನ್ ಯೋಜನೆಗೆ ವಿಳಂಬ

13 (236) : ಶ್ರೀ ಚಂದ್ರಶೇಖರ್ ಡಿ. ಪಾಟೀಲ್ ರೇವೂರ್ (ಗುಲ್ಬರ್ಗ) ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಗುಲ್ಬರ್ಗಾದಲ್ಲಿ ಕುಡಿಯುವ ನೀರು ಸರಬರಾಜು ವ್ಯವಸ್ಥೆ ನವೀಕರಣ ಯೋಜನೆಗೆ ನಿಗಧಿಪಡಿಸಿರುವ ಹಣ ಎಷ್ಟು;

ಆ) ನಗರಕ್ಕೆ ಯಾವ ಯಾವ ಮೂಲಗಳಿಂದ ನೀರು ಸರಬರಾಜು ಮಾಡಲಾಗುತ್ತಿದೆ;

ಇ) ಪೈಪ್ ಲೈನ್ ನವೀಕರಣ ಕಾಮಗಾರಿ ಯಾವ ಹಂತದಲ್ಲಿದೆ. ಹಾಗೂ ಆ ಕಾರ್ಯ ನಿರ್ವಹಣೆಯಲ್ಲಿ ವಿಳಂಬವಾಗಲು ಕಾರಣಗಳೇನು;

ಈ) ಯೋಜನಾ ವೆಚ್ಚದ ವಿವರಗಳನ್ನು ಹಾಗೂ ಯೋಜನಾ ಗಾತ್ರವನ್ನು ತಿಳಿಸುವುದು;

ಉ) ಇದಕ್ಕಾಗಿ ಮುಖ್ಯಮಂತ್ರಿಗಳ ಪ್ಯಾಕೇಜ್‌ನ್ನು ಘೋಷಿಸಲಾಗಿದೆಯೇ; ಮತ್ತು ಪ್ಯಾಕೇಜ್ ಮೊತ್ತ ಎಷ್ಟು; ವಿವರ ಒದಗಿಸುವುದು?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಯವರು)

ಅ) ರೂ. 5797.86 ಲಕ್ಷಗಳು

ಆ) ಸದ್ಯ ನಗರಕ್ಕೆ ಬೆಣ್ಣೆತೋರಾ ಮತ್ತು ಭೀಮಾ ನದಿ ಮೂಲಗಳಿಂದ ನೀರು ಸರಬರಾಜು ಮಾಡಲಾಗುತ್ತಿದೆ.

ಇ) ಯೋಜನೆಯ ಶೇ. 60 ರಷ್ಟು ಕಾಮಗಾರಿಗಳು ಪೂರ್ಣಗೊಂಡಿದ್ದು ಬಾಕಿ ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ. ಗುಲ್ಬರ್ಗಾ ಮಹಾನಗರ ಪಾಲಿಕೆಯಿಂದ ಹಸ್ತಾಂತರಗೊಂಡ ಕೆಲವು ಸ್ಥಳಗಳಲ್ಲಿ ವಿವಾದದಿಂದ ಹಾಗೂ ಹಣ ಸಕಾಲಕ್ಕೆ ಬಿಡುಗಡೆಯಾಗದ ಕಾರಣ ವಿಳಂಬವಾಗಿರುತ್ತದೆ.

ಈ) ಈ ಯೋಜನೆಗೆ ಜೂನ್ 2004 ರವರೆಗೆ ರೂ. 2001.33 ಲಕ್ಷ ವೆಚ್ಚವಾಗಿರುತ್ತದೆ. ಈ ಯೋಜನೆಯ ಒಟ್ಟು ಗಾತ್ರವು ರೂ. 5797.86 ಲಕ್ಷಗಳಾಗಿರುತ್ತದೆ.

ಉ) ಹೌದು.

ಗುಲ್ಬರ್ಗಾ ನಗರದ ಸಮಗ್ರ ಅಭಿವೃದ್ಧಿಗಾಗಿ ರೂ. 130.00 ಕೋಟಿಗಳ ವಿಶೇಷ ಪ್ಯಾಕೇಜ್ ಘೋಷಿಸಲಾಗಿದ್ದು, ಅದರಲ್ಲಿ ರೂ. 74.60 ಕೋಟಿಗಳನ್ನು ನೀರು ಸರಬರಾಜು ಮತ್ತು ಒಳಚರಂಡಿ ಯೋಜನೆಗೆ ನಿಗಧಿಪಡಿಸಲಾಗಿದೆ.

ಶೃಂಗೇರಿ ಕ್ಷೇತ್ರದಲ್ಲಿ ಕಾಣಿಸಿಕೊಂಡಿರುವ ನಕ್ಸಲ್ ಚಟುವಟಿಕೆ

15 (23) : ಶ್ರೀ ಜೀವರಾಜ್ ಡಿ.ಎನ್. (ಶೃಂಗೇರಿ) ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮಲೆನಾಡಿನಲ್ಲಿ ಕಾಣಿಸಿಕೊಂಡಿರುವ ನಕ್ಸಲ್ ಚಟುವಟಿಕೆಗಳನ್ನು ನಿವಾರಿಸಲು ಸರ್ಕಾರ ತೆಗೆದುಕೊಂಡ ಕ್ರಮವೇನು;

ಆ) ಶೃಂಗೇರಿ ಕ್ಷೇತ್ರದ ಯಾವ ಯಾವ ಭಾಗಗಳು ನಕ್ಸಲ್ ಪೀಡಿತ ಎಂದು ಗುರುತಿಸಲಾಗಿದೆ;

ಇ) ದೇಶದ ಪ್ರಸಿದ್ಧ ಯಾತ್ರಾ ಹಾಗೂ ಭಕ್ತಿ ಕೇಂದ್ರವಾದ ಶೃಂಗೇರಿಯ ಸುತ್ತಮುತ್ತ ಹೆಚ್ಚಿನ ಭದ್ರತೆ ಒದಗಿಸಲಾಗಿದೆಯೇ;

ಈ) ಒದಗಿಸಲಾಗದಿದ್ದಲ್ಲಿ, ಸರ್ಕಾರ ಈ ಬಗ್ಗೆ ಕ್ರಮ ಕೈಗೊಳ್ಳುವುದೇ?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಯವರು)

ಅ) ಒಂದು ನಕ್ಸಲ್ ನಿಗ್ರಹ ದಳವನ್ನು ರಚಿಸಿ ಇದರಲ್ಲಿ ಒಂದು ಪೊಲೀಸ್ ಇನ್ಸ್‌ಪೆಕ್ಟರ್ ಹಾಗೂ 10 ಜನ ಡಿ.ಎ.ಆರ್. ಸಿಬ್ಬಂದಿಗಳನ್ನು ನೇಮಿಸಿ ಸದರಿ ದಳವನ್ನು ಕುದುರೆಮುಖ ರಾಷ್ಟ್ರೀಯ